# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 416
ಸದಸ್ಯರ ಹೆಸರು : ಶ್ರೀ. ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ : 30.01.2026.

******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಖಾಸಗಿ ಟ್ರಸ್ಟ್ ಗಳಲ್ಲಿ ವಸತಿ ಮತ್ತು ಶಿಕ್ಷಣವನ್ನು ಮಕ್ಕಳ ತಂದೆ ತಾಯಿಯವರ ಒಪ್ಪಿಗೆಯೊಂದಿಗೆ ವಿದ್ಯಾಭ್ಯಾಸ ಮಾಡಲು ಅವಕಾಶವಿದೆಯೇ; ಇದ್ದಲ್ಲಿ ಮಾರ್ಗಸೂಚಿಗಳಾವುವು; | ಖಾಸಗಿ ಟ್ರಸ್ಟ್‌ಗಳಲ್ಲಿ ವಸತಿ ಮತ್ತು ಶಿಕ್ಷಣವನ್ನು ಮಕ್ಕಳ ತಂದೆ ತಾಯಿಯವರ ಒಪ್ಪಿಗೆಯೊಂದಿಗೆ ವಿದ್ಯಾಭ್ಯಾಸ ಮಾಡಲು ಅವಕಾಶವಿದೆ.<br>ಆದರೆ ಖಾಸಗಿ ಟ್ರಸ್ಟ್ ಗಳಲ್ಲಿನ ವಸತಿ/ ಶಿಕ್ಷಣ ಸಂಸ್ಥೆಗಳಲ್ಲಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015, ತಿದ್ದುಪಡಿ 2021, ಬಾಲನ್ಯಾಯ ಮಾದರಿ ನಿಯಮಗಳು 2016 ತಿದ್ದುಪಡಿ ನಿಯಮ, 2022 ರನ್ವಯ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸ ಬೇಕಾಗಿರುತ್ತದೆ.<br>ಒಂದು ವೇಳೆ ಸಂಸ್ಥೆಯಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸದಿದ್ದಲ್ಲಿ ಸಂಬಂಧಪಟ್ಟ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯು ತನಿಖೆ ನಡೆಸಿ ನಿಯಮಾನುಸಾರ ಕ್ರಮ ಜರುಗಿಸಲು ಅವಕಾಶವಿರುತ್ತದೆ. |
| ಆ) | ಸ್ಥಳೀಯ ಶಾಲೆಗಳಲ್ಲಿ ಪ್ರವೇಶ ಪಡೆಯುತ್ತಿರುವ ಮಕ್ಕಳಿಗೆ ಖಾಸಗಿ ಟ್ರಸ್ಟ್‌ಗಳಲ್ಲಿ ವಸತಿ ಮತ್ತು ವಿದ್ಯಾಭ್ಯಾಸ ಮಾಡಲು ಅವಕಾಶ ಇದೆಯೇ; (ವಿವರ ನೀಡುವುದು) | ಅನುದಾನಿತ/ ಅನುದಾನರಹಿತ/ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಿಂದ ಸ್ಥಳೀಯ ಶಾಲೆಗಳಲ್ಲಿ ಪ್ರವೇಶ ಪಡೆದಿರುವ ಮಕ್ಕಳನ್ನು ಸರ್ಕಾರದ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ವಸತಿ ಶಾಲೆಗಳಲ್ಲಿ (ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಇತ್ಯಾದಿ) ವಿದ್ಯಾಭ್ಯಾಸ ಮಾಡಲು ಅವಕಾಶ ಕಲ್ಪಿಸಲಾಗಿದೆ. |
| ಇ) | 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮಠಗಳು ಮತ್ತು ಧಾರ್ಮಿಕ ಸಂಸ್ಥೆಗಳು ನಡೆಸುವ ಉಚಿತ ಹಾಸ್ಟೆಲ್‌ಗಳಲ್ಲಿ ವಸತಿ ಮತ್ತು ಅಭ್ಯಾಸ ಮಾಡಲು ಅವಕಾಶವಿದೆಯೇ; | ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015, ತಿದ್ದುಪಡಿ 2021, ಬಾಲನ್ಯಾಯ ಮಾದರಿ ನಿಮಗಳು 2016 ತಿದ್ದುಪಡಿ ನಿಯಮ, 2022ರನ್ವಯ ನೋಂದಣಿಯಾಗಿ ನವೀಕರಣಗೊಂಡಿರುವ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಶಿಕ್ಷಣ ಅಭ್ಯಾಸ ಮಾಡಲು ಅವಕಾಶ ಇದೆ. |
| ಈ) | ಸರ್ಕಾರದ ಅನುಮತಿಯನ್ನು ಪಡೆದು ನಡೆಸುತ್ತಿರುವ ಖಾಸಗಿ ಟ್ರಸ್ಟ್‌ಗಳು ಎಷ್ಟು; (ವಿವರ ನೀಡುವುದು) | ಬಾಲನ್ಯಾಯ ಕಾಯ್ದೆ, ಅಡಿ ನೋಂದಣಿಯಾದ ಮಕ್ಕಳ ಪಾಲನಾ ಸಂಸ್ಥೆಗಳ ಸಂಖ್ಯೆ-**726**, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳ ಸಂಖ್ಯೆ-**534** |
| ಉ) | ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಖಾಸಗಿ ಟ್ರಸ್ಟ್‌ಗಳು ಮಕ್ಕಳಿಗೆ ವಸತಿ ಕಲ್ಪಿಸುವ ಯಾವ ಯಾವ ನಿರ್ದೇಶನವಿದೆ? | ಮಕ್ಕಳ ಪಾಲನಾ ಸಂಸ್ಥೆಗಳು ಮಕ್ಕಳಿಗೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015, ತಿದ್ದುಪಡಿ 2021, ಬಾಲನ್ಯಾಯ ಮಾದರಿ ನಿಯಮಗಳು 2016 ತಿದ್ದುಪಡಿ ನಿಯಮ, 2022 ಹಾಗೂ ಕೇಂದ್ರ ಸರ್ಕಾರದ ಮಿಷನ್ ವಾತ್ಸಲ್ಯ ಮಾರ್ಗಸೂಚಿಗಳಲ್ಲಿ ಅವಕಾಶವಿರುತ್ತದೆ. |

ಮಮಇ 26 ಮಭಾಬ 2026

**(ಲಕ್ಷ್ಮೀ ಆರ್. ಹೆಬ್ಬಾಳ್ಕರ್)**
ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು.